


## ಸೂಚನೆಗಳು

- ಸತ್ತಿರುವ ಹಿಪ್ಪುನೇರಳೆ ಗಿಡಗಳನ್ನು ತೆಗೆದು ಹಾಕಿ ಸುಡಬೇಕು ಹಾಗೂ ಮಣ್ಣನ್ನು ಬಿಸಿಲಿಗೆ ಒಡ್ಡಬೇಕು
- ಹೊಸ ಸಸಿಗಳನ್ನು ನೆಡುವ ಮುನ್ನ ಅವುಗಳ ಬೇರನ್ನು ಶೇ. 0.4 **ರಾಟ್‌ಫಿಕ್ಸ್** ದ್ರಾವಣದಲ್ಲಿ 20 ನಿಮಿಷಗಳ ಕಾಲ ಅದ್ದಿ ನೆಡಬೇಕು
- ರೋಗ ಹರಡುವುದನ್ನು ತಪ್ಪಿಸಲು ರೋಗಗ್ರಸ್ಥ ಗಿಡದ ಸುತ್ತಲಿನ ಗಿಡಗಳನ್ನು ಸಹ **ರಾಟ್‌ಫಿಕ್ಸ್**ನಿಂದ ಉಪಚರಿಸಬೇಕು
- ರೋಗವು ಪ್ರಾರಂಭಿಕ ಹಂತದಲ್ಲಿರುವಾಗಲೇ **ರಾಟ್‌ಫಿಕ್ಸ್** ನಿಂದ ಉಪಚರಿಸಬೇಕು
- ಉಪಚರಿಸಿದ 2–3 ದಿನಗಳ ನಂತರ ನೀರು ಹಾಯಿಸಬೇಕು
- ಗಿಡಗಳು 30 ದಿನಗಳಲ್ಲಿ ಪುನರುಜ್ಜೀವನವಾಗದಿದ್ದಲ್ಲಿ ಪುನಃ **ರಾಟ್‌ಫಿಕ್ಸ್** ನಿಂದ ಉಪಚರಿಸಿ
- ಮಣ್ಣಿನ ಸಾವಯವ ಇಂಗಾಲವನ್ನು ಹೆಚ್ಚಿಸಲು ಸಾಕಷ್ಟು ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಹಾಕಬೇಕು
- ರೋಗ ಹರಡುವಿಕೆಯನ್ನು ತಪ್ಪಿಸಲು ಮಣ್ಣಿನಲ್ಲಿ ಶೇ. 40ಕ್ಕಿಂತ ಹೆಚ್ಚಿನ ತೇವಾಂಶವನ್ನು ಕಾಯ್ದಿರಿಸಿಕೊಳ್ಳಬೇಕು

## ಮುನ್ನೆಚ್ಚರಿಕೆ ಕ್ರಮಗಳು

- **ರಾಟ್‌ಫಿಕ್ಸ್**ನ್ನು ಗಾಳಿಯಾಡದ ಡಬ್ಬಿಗಳಲ್ಲಿ ಮುಚ್ಚಿ ಇಡಿ
- ಮಕ್ಕಳ ಕೈಗೆ ಎಟುಕದಂತೆ ಇಡಿ
- ನೇರವಾಗಿ ಸೂರ್ಯನ ಬೆಳಕಿಗೆ ಒಡ್ಡಬೇಡಿ



ಪಠ್ಯ
ಪ್ರತೀಶ್‌ಕುಮಾರ್ ಪಿ.ಎಮ್., ರಾಜಶೇಖರ್ ಕೆ. & ವಿ. ಶಿವಪ್ರಸಾದ್
(ಕನ್ನಡ ಅನುವಾದ: ನರೇಂದ್ರ ಕುಮಾರ್ ಜೆ.ಬಿ)

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ನಿರ್ದೇಶಕರು
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ISO 9001: 2015 ಪ್ರಮಾಣೀಕೃತ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಮಾನಂದವಾಡಿ ರಸ್ತೆ
ಶ್ರೀರಾಂಪುರ, ಮೈಸೂರು – 570008
ಫೋನ್: 0821–2362757, 2362406
ಫ್ಯಾಕ್ಸ್ : 0821–2362845
email: cstrimys.csb@nic.in www.csrtimys.res.in

Copies: 1000 January 2017 Design & Layout: J. Justin Kumar

Technical Bulletin No.15 [Kan]

# ರಾಟ್‌ಫಿಕ್ಸ್

## ಹಿಪ್ಪುನೇರಳೆ ಬೇರು ಕೊಳೆ ರೋಗ ಹತೋಟಿಗಾಗಿ ಪರಿಸರ ಸ್ನೇಹಿ ಔಷಧಿ




**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ISO 9001: 2015 ಪ್ರಮಾಣೀಕೃತ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ
ಮೈಸೂರು – 570008

## ಹಿಪ್ಪುನೇರಳೆಯಲ್ಲಿ ಬೇರು ಕೊಳೆ ರೋಗ

ಬೇರು ಕೊಳೆ ಹಿಪ್ಪುನೇರಳೆಯಲ್ಲಿ ಒಂದು ಅಪಾಯಕಾರಿ ರೋಗ. ಇದು ಹಿಪ್ಪುನೇರಳೆ ವ್ಯವಸಾಯ ಮಾಡುತ್ತಿರುವ ಎಲ್ಲಾ ಪ್ರದೇಶಗಳಲ್ಲೂ ವ್ಯಾಪಕವಾಗಿ ಕಂಡುಬರುತ್ತದೆ. ಈ ರೋಗ ಉಂಟಾಗಲು ಕಾರಣವಾಗಿರುವ ಶಿಲೀಂದ್ರಗಳೆಂದರೆ ಫ್ಯುಸೇರಿಯಂ ಸೊಲಾನಿ, ರೈಜ಼ೋಕ್ಟೋನಿಯ ಬಟಾಟಿಕೋಲ ಮತ್ತು ಬೊಟ್ರಿಡಿಪ್ಲೋಡಿಯ ಥಿಯೋಬ್ರೊಮೆ. ಈ ರೋಗವು ವರ್ಷದ ಎಲ್ಲಾ ಋತುಗಳಲ್ಲೂ ಕಾಣಿಸಿಕೊಳ್ಳುತ್ತದೆ.

## ರೋಗ ಲಕ್ಷಣಗಳು ಮತ್ತು ಉಲ್ಬಣಗೊಳ್ಳುವಿಕೆ

- ಈ ರೋಗದ ಲಕ್ಷಣಗಳೆಂದರೆ ಗಿಡಗಳು ತಕ್ಷಣ ಕಳೆಗುಂದುವುದು, ಸೊರಗುವುದು, ಎಲೆಗಳ ಉದುರುವಿಕೆ
- ತದನಂತರ ಬೇರುಗಳು ಕೊಳೆತು ಬಾಧಿತ ಗಿಡಗಳು ಸಾಯುತ್ತವೆ
- ಈ ರೋಗದಿಂದ ಅಂದಾಜು ಶೇ.30ರಷ್ಟು ಗಿಡಗಳಿಗೆ ಸಾವು ಉಂಟಾಗುವುದಲ್ಲದೆ ಸುಮಾರು ಶೇ.14ರಷ್ಟು ಸೊಪ್ಪಿನ ಇಳುವರಿ ಕಡಿಮೆಯಾಗುತ್ತದೆ
- ಈ ರೋಗವು 30–35$^{\circ}$ಸೆಂಟಿಗ್ರೇಡ್ ಉಷ್ಣಾಂಶ ಮತ್ತು ಶೇ.40ಕ್ಕೂ ಕಡಿಮೆ ತೇವಾಂಶ ಇರುವ ಮಣ್ಣಿನಲ್ಲಿ ಬಹಳ ಬೇಗನೆ ಹರಡುತ್ತದೆ



- ಈ ರೋಗವು ಪ್ರಾರಂಭದಲ್ಲಿ ಪ್ರತ್ಯೇಕವಾಗಿ ಅಲ್ಲಲ್ಲಿ ಕೆಲವು ಗಿಡಗಳಲ್ಲಿ ಮಾತ್ರ ಕಂಡುಬಂದು ನಂತರ ಸುತ್ತಮುತ್ತಲಿನ ಗಿಡಗಳಿಗೆ ಹಬ್ಬುತ್ತದೆ
- ಇದರ ರೋಗಾಣುಗಳು ಬೇರಿನ ಕಾರ್ಟೆಕ್ಸ್ ಒಳಗೆ ಪ್ರವೇಶವಾಗಿ ಅಲ್ಲಿ ಸ್ಥಾಪಿತಗೊಂಡು ನಂತರ ಕಪ್ಪನೆಯ ಹಲವಾರು ಬೀಜಕಗಳಾಗುತ್ತವೆ
- ಬೇರಿನ ಸುತ್ತಲೂ ಇರುವ ಕಾರ್ಟೆಕ್ಸ್ ಒಣಗಿ ಬಿದ್ದುಹೋಗಿ ಬೇರು ಕೊಳೆಯಲು ಆರಂಭವಾಗುತ್ತದೆ. ಅಂಥಹ ಗಿಡಗಳು ಮಣ್ಣಿನ ಜೊತೆ ಸಂಪರ್ಕ ಕಳೆದುಕೊಳ್ಳುವುದರಿಂದ ಸುಲಭವಾಗಿ ಕಿತ್ತು ಬರುತ್ತವೆ

### ರಾಟ್‌ಫಿಕ್ಸ್ ಬಳಸುವ ವಿಧಾನ




ಬಾಧಿತ ಗಿಡವನ್ನು ಭೂಮಟ್ಟದಿಂದ 30 ಸೆಂ.ಮೀ. ಮೇಲೆ ಕತ್ತರಿಸಿ

ಗಿಡದಿಂದ 20–30 ಸೆಂ.ಮೀ. ಸುತ್ತಲೂ ಅಗೆದು ಮಣ್ಣನ್ನು ತೆಗೆದು ಪಾತಿ ಮಾಡಿ







10 ಗ್ರಾಂ. **ರಾಟ್‌ಫಿಕ್ಸ್‌ನ್ನು** 2 ಲೀಟರ್ ನೀರಿನಲ್ಲಿ ಬೆರೆಸಿ

ಈ ದ್ರಾವಣವನ್ನು ಕಾಂಡವು ಚೆನ್ನಾಗಿ ತೋಯುವಂತೆ ಮೇಲಿನಿಂದ ಸುರಿಯಿರಿ







ತಕ್ಷಣ ಮಣ್ಣಿನಿಂದ ಮುಚ್ಚಿರಿ

ಗಿಡದ ಸುತ್ತಲಿನ ಮಣ್ಣನ್ನು ಚೆನ್ನಾಗಿ ಒತ್ತಿರಿ




## ಉಪಯೋಗಗಳು

- ಬೇರು ಕೊಳೆ ರೋಗಕ್ಕೆ ಸಂಬಂಧಿಸಿದ ಎಲ್ಲಾ ಶಿಲೀಂದ್ರಗಳ ಮೇಲೆ ಪರಿಣಾಮಕಾರಿಯಾಗಿದೆ
- ಆರಂಭಿಕ ಹಂತದಲ್ಲೇ ಉಪಯೋಗಿಸಿದಲ್ಲಿ ಬಾಧಿತ ಸಸ್ಯಗಳ ಸಂಪೂರ್ಣ ಪುನರುಜ್ಜೀವನವಾಗುತ್ತದೆ
- ಇದು ಶೇ. 89.5ರಷ್ಟು ಪರಿಸರ ಸ್ನೇಹಿ ಜೈವಿಕ ವಸ್ತು ಹಾಗೂ ಶೇ.8ರಷ್ಟು ಸಾವಯವ ವಸ್ತುವನ್ನು ಹೊಂದಿದೆ
- ಬೆಲೆ ಕಡಿಮೆ ಇರುವುದರಿಂದ ರೋಗದ ಹತೋಟಿಯು ಮಿತವ್ಯಯದಲ್ಲಿ ಆಗುತ್ತದೆ
- ಮಣ್ಣಿನಲ್ಲಿರುವ ಲಾಭದಾಯಕ ಸೂಕ್ಷ್ಮ ಜೀವಿಗಳ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲ
- ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಯಾವುದೇ ವ್ಯತಿರಿಕ್ತ ಪರಿಣಾಮ ಉಂಟಾಗುವುದಿಲ್ಲ
- ತಯಾರಿಸಿದ ದಿನಾಂಕದಿಂದ 2 ವರ್ಷಗಳವರೆಗೂ **ರಾಟ್‌ಫಿಕ್ಸ್** ಪರಿಣಾಮಕಾರಿಯಾಗಿರುತ್ತದೆ